**ಸಿ.ಡಬ್ಲೂ-5 / ಪಿ.ಡಬ್ಲೂ-5**

## ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು, ಮೈಸೂರು ಜಿಲ್ಲೆ .

**ಸಿ.ಸಿ.ನಂ. 1133/2018**

| | | |
|---|---|---|
| ಸಾಕ್ಷಿದಾರರ ಹೆಸರು | : | ಗಿರೀಶ |
| ತಂದೆಯ ಹೆಸರು | : | ಶಿವಣ್ಣ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಖಾಸಗಿ ಶಾಲೆಯ ಅಟೆಂಡರ್ |
| ವಾಸಸ್ಥಳ | : | ಹುಲ್ಲಹಳ್ಳಿ, ನಂಜನಗೂಡು ತಾ. |

**ಸಾಕ್ಷಿಯನ್ನು ದಿನಾಂಕಃ 28.07.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ** ಸ. ಸ. ಅ. **ರವರಿಂದಃ**

ಚಾಸಾ-1 ನನ್ನ ತಂದೆ, ಆರೋಪಿಗಳು ನಮ್ಮ ಗ್ರಾಮದ ನಿವಾಸಿಗಳಾಗಿರುತ್ತಾರೆ.

ದಿನಾಂಕ 03.07.2017 ರಂದು ಮಧ್ಯಾಹ್ನ 1.30-2.00 ಗಂಟೆ ಸಮಯದಲ್ಲಿ ನನ್ನ ತಂದೆ ಗಾಬರಿಯಾಗಿ ಮನೆಗೆ ಬಂದಿರುತ್ತಾರೆ, ನಾನು ನೋಡಿದಾಗ ಅವರ ಬಲಭಾಗದ ಕಣ್ಣಿನ ಬಳಿ ರಕ್ತಗಾಯವಾಗಿದ್ದು, ನನ್ನ ತಂದೆಯನ್ನು ವಿಚಾರಿಸಿದಾಗ ಆರೋಪಿಗಳು ನೀರಿನ ವಿಷಯವಾಗಿ ಸರ್ವೆ ನಂ. 30/3 ರ ಜಮೀನಿನಲ್ಲಿ ಗಲಾಟೆ ಮಾಡಿ, ಕೈಯಿಂದ ಹಲ್ಲೆ ಮಾಡಿರುತ್ತಾರೆಂದು ನನಗೆ ತಿಳಿಸಿರುತ್ತಾರೆ. ನಂತರ ನಾನು ನನ್ನ ತಂದೆಯನ್ನು ನಂಜನಗೂಡಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಅಲ್ಲಿ ಪಥಮ ಚಿಕಿತ್ಸೆ ಕೊಡಿಸಿ, ನಂತರ ಮೈಸೂರಿನ ಕೆ.ಆರ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಈ ವಿಚಾರವಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸ.ಸ.ಅ ಕೋರಲಾಗಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸ.ಸ.ಅ ರವರಿಂದಃ**

ದಿನಾಂಕ 03.09.2017 ರಂದು ಮಧ್ಯಾಹ್ನ 2.45 ಗಂಟೆ ಸಮಯದಲ್ಲಿ ನಾನು ಮನೆಯಲ್ಲಿರುವಾಗ ನನ್ನ ತಂದೆ ಮನೆಗೆ ಬಂದಿದ್ದು, ಅವರ ಮುಖದಲ್ಲಿ ಗಾಯವುಂಟಾಗಿರುವುದನ್ನು ನೋಡಿ, ನನ್ನ ತಂದೆಯನ್ನು ವಿಚಾರಿಸಿದಾಗ ಮಧ್ಯಾಹ್ನ 2.00 ಗಂಟೆ ಸಮಯದಲ್ಲಿ ಕಣೇನೂರು ಎಲ್ಲೆಗೆ ಸೇರಿದ ಸರ್ವೆ ನಂ. 30/3 ರಲ್ಲಿ ಗದ್ದೆ ಕೆಲಸ ಮಾಡುವಾಗ ಆರೋಪಿಗಳು ಗದ್ದೆ ನೀರು ಹಾಯಿಸುವ ಸಲುವಾಗಿ ಪೈಪ್ ಅಳವಡಿಸಿದ್ದು, ಪೈಪ್ ಲೀಕ್ ಹಾಗಿ ನಮ್ಮ ಗದ್ದೆಗೆ ನೀರು ತುಂಬಿಕೊಂಡಿದ್ದು, ಮುಸುಕಿನ ಜೋಳಕ್ಕೆ ತೊಂದರೆಯಾಗಿದ್ದರಿಂದ ಆರೋಪಿಗಳನ್ನು ವಿಚಾರಿಸಿದಾಗ ಆರೋಪಿಗಳು ನನ್ನ ತಂದೆಯನ್ನು ಕೆಳಕ್ಕೆ ಬೀಳಿಸಿ ಕೈಗಳಿಂದ ಬಲಕೆನ್ನೆಯ ಬಳಿ ಮತ್ತು ಕಣ್ಣಿಗೆ ಹಾಗು ತಲೆಯ ಹತ್ತಿರ, ಬಲಕಿವಿ ಬಳಿ ಹೊಡೆದಿರುತ್ತಾರೆಂದರೆ ಬಲಗಣ್ಣಿನ ಬಳಿ ಮತ್ತು ಕಿವಿಯ ಹತ್ತಿರ ಹಾಗು ಎದೆಗೆ ಹೊಡೆದಿರುತ್ತಾರೆ ಎಂದು ತಿಳಿಸಿರುತ್ತಾರೆ. ಆ ಸಮಯದಲ್ಲಿ ಚಾಸಾ–2 ಮತ್ತು 3 ಗಲಾಟೆ ಬಿಡಿಸಿರುತ್ತಾರೆಂದು ನನಗೆ ತಿಳಿಸಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಆರೋಪಿಗಳು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದು ನನ್ನ ತಂದೆ ತಿಳಿಸಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎಂ.ಸಿ.ಎಸ್, ವಕೀಲರಿಂದಃ**

ನಾನು ಗಲಾಟೆಯನ್ನು ಖುದ್ದಾಗಿ ನೋಡಿರುವುದಿಲ್ಲ. ಸರ್ವೆ ನಂ. 30/3 ಈ ಮೊದಲು ನನ್ನ ತಾಯಿಯ ಹೆಸರಿನಲ್ಲಿತ್ತು, ನನ್ನ ತಂದೆಯ ಹೆಸರಿನಲ್ಲಿರಲಿಲ್ಲ. ನನ್ನ ತಾಯಿಯ ಹೆಸರಿನಲ್ಲಿದ್ದ ಜಮೀನನ್ನು ಭೋಗ್ಯಕ್ಕೆ ಕೊಟ್ಟಿದ್ದೆವು ಎಂದರೆ ಸರಿಯಲ್ಲ. ಗಲಾಟೆ ಎಷ್ಟು ಗಂಟೆಗೆ ನಡೆದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಗಲಾಟೆ ನಡೆದ 3–4 ದಿವಸಗಳ ನಂತರ ನಾನು ಪೊಲೀಸರಿಗೆ ಠಾಣೆಗೆ ಹೋಗಿ ಹೇಳಿಕೆ ನೀಡಿರುತ್ತೇನೆ. ಜಮೀನಿನಲ್ಲಿ ಕೆಲಸ

ಮಾಡುವಾಗ ನನ್ನ ತಂದೆಯೇ ಕೆಳಕ್ಕೆ ಬಿದ್ದು ಸ್ವತಃ ಗಾಯ ಮಾಡಿಕೊಂಡಿದ್ದು, ಆರೋಪಿಗಳ ಮೇಲಿನ ದ್ವೇಷದಿಂದ ಆರೋಪಿಗಳು ಹಲ್ಲೆ ಮಾಡಿರುತ್ತಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿವಸ ನನ್ನ ತಂದೆ ಜಮೀನಿಗೆ ಹೋಗಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ತಂದೆಯನ್ನು ಆಸ್ಪತ್ರೆಗೆ ಕರೆದುಕೊಂಡು ಬಂದಾಗ ಪೊಲೀಸ್ ಠಾಣೆಗೆ ಮಾಹಿತಿ ನೀಡಿರುವುದಿಲ್ಲ. ಒಂದು ವೇಳೆ ಗಲಾಟೆ ನಡೆದಿದ್ದರೆ, ಆ ದಿವಸವೇ ಠಾಣೆಗೆ ಹೋಗಿ ದೂರು ಹೋಗಿ ನೀಡುತ್ತಿದ್ದೆವು, ಆದ್ದರಿಂದ ನಾನು ಮತ್ತು ನನ್ನ ತಂದೆ ಹೇಳಿರುವಂತೆ ಯಾವುದೇ ಗಲಾಟೆ ನಡೆದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ:** ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/–

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**
**ನಂಜನಗೂಡು.**